ನಟರಾಜ್ ಹುಳಿಯಾರ್

ಚಿತ್ರ: ಎಂ. ಶ್ರೀಧರಮೂರ್ತಿ

# ಸಿದ್ಧತೆ, ಶ್ರಮ, ಮಹತ್ವಾಕಾಂಕ್ಷೆ

# ಡಿ.ಆರ್. ನಾಗರಾಜರ ತಾರುಣ್ಯದ ಟಿಪ್ಪಣಿಗಳು

ಕನ್ನಡ ಸಾಹಿತ್ಯದ ಧೀಮಂತ ವಿಮರ್ಶಕ, ಚಿಂತಕ ಡಿ.ಆರ್. ನಾಗರಾಜ್ ಅವರು ತಮ್ಮ 20–21ನೇ ಹರೆಯದಲ್ಲಿ ಮಾಡಿಕೊಂಡ ಸಾಹಿತ್ಯಕ್ಕೆ ಸಂಬಂಧಿಸಿದ ಟಿಪ್ಪಣಿಗಳ ಕೆಲವು ಮಿಂಚಿನ ನೋಟಗಳನ್ನು ಪ್ರಸ್ತುತ ಬರಹದಲ್ಲಿ ಕೊಡಲಾಗಿದೆ. ಅವು ತರುಣ ವಿದ್ವಾಂಸನ ಬೌದ್ಧಿಕ ತಯಾರಿಯನ್ನು, ಖಚಿತ ನಿಲುವು, ವಿಮರ್ಶೆಗಳನ್ನು ತೋರುತ್ತವೆ; ಈಗಿನ ಯುವ ಬರಹಗಾರರಿಗೆ ಮಾರ್ಗದರ್ಶಿಯೂ ಆಗಿವೆ.

ಲೇಖಕ ಮಿತ್ರರಾದ ಅಗ್ರಹಾರ ಕೃಷ್ಣಮೂರ್ತಿಯವರ ಪುಸ್ತಕರಾಶಿಯಲ್ಲಿ ಸೇರಿಕೊಂಡಿದ್ದ ಆ ಟಿಪ್ಪಣಿಗಳು ನನ್ನ ಕಣ್ಣಿಗೆ ಬಿದ್ದಿದ್ದು ಆಕಸ್ಮಿಕವಾಗಿತ್ತು. ಇಂಡಿಯಾದ ಶ್ರೇಷ್ಠ ಚಿಂತಕರಲ್ಲೊಬ್ಬರಾದ ಡಾ. ಡಿ.ಆರ್. ನಾಗರಾಜ್ (20 ಫೆಬ್ರುವರಿ 1954–12 ಆಗಸ್ಟ್ 1998) ಅವರ ಇಪ್ಪತ್ತನೆಯ ವಯಸ್ಸಿನ ಪ್ರಬುದ್ಧ ಚಿಂತನೆಗಳನ್ನು, ಅವರ ಬೌದ್ಧಿಕ ಬದುಕು ಮುಂದೆ ಹಿಡಿಯಲಿದ್ದ ದಿಕ್ಕುಗಳನ್ನು ಸ್ಪಷ್ಟವಾಗಿ ಸೂಚಿಸುವ ಟಿಪ್ಪಣಿಗಳಿವು. 1974ರ ವರ್ಷದ ಓದು, ಬರಹ, ಚಿಂತನೆ, ಕ್ರಿಯೆ, ತಲ್ಲಣಗಳನ್ನು ಆಗಾಗ್ಗೆ ದಾಖಲಿಸಿರುವ ಈ ಟಿಪ್ಪಣಿಗಳ ಕಾಲದಲ್ಲಿ ಡಿ.ಆರ್. ಬೆಂಗಳೂರಿಗೆ 40 ಕಿ.ಮೀ. ದೂರವಿರುವ ದೊಡ್ಡಬಳ್ಳಾಪುರದಿಂದ ನಿತ್ಯ ರೈಲಿನಲ್ಲಿ ಬೆಂಗಳೂರಿಗೆ ಬಂದು, ಬೆಂಗಳೂರು ವಿ.ವಿ.ಯ ಕನ್ನಡ ಅಧ್ಯಯನ ಕೇಂದ್ರದಲ್ಲಿ ಎರಡನೇ ಎಂ.ಎ. ಓದುತ್ತಿದ್ದರು. ಆ ಹೊತ್ತಿಗಾಗಲೇ ಸಾಹಿತ್ಯ, ಸಮಾಜ, ಸಿದ್ಧಾಂತ, ವಿಮರ್ಶೆಗಳ ಬಗೆಗೆ ಖಚಿತ ನಿಲುವುಗಳುಳ್ಳ ವಿದ್ಯಾರ್ಥಿಯಾಗಿದ್ದ ಅವರ ಹಲಬಗೆಯ ಕಾಳಜಿ, ತುಡಿತಗಳ ಎಳೆಗಳು ಈ ಪುಟಗಳಲ್ಲಿವೆ.